# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1363 (1572) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಚನ್ನರಾಜ್ ಬಸವರಾಜ್ ಹಟ್ಟಿಹೊಳಿ<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19.12.2025 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕ್ರೈಸ್) ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಸತಿ ಶಾಲೆಗಳ ನಿಲಯಪಾಲಕರಿಗೆ ಸರ್ಕಾರಿ ರಜೆ ಅನ್ವಯಿಸುತ್ತದೆಯೇ; | ಅನ್ವಯಿಸುವುದಿಲ್ಲ,<br>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ ನಿಲಯಪಾಲಕರಿಗೆ ವಾರದ ರಜೆಯನ್ನು ಪ್ರತಿ ಗುರುವಾರ ದಿನ ಎಂದು ನಿಗಧಿಪಡಿಸಲಾಗಿರುತ್ತದೆ, ನಿಲಯಪಾಲಕರ ದೈನಂದಿನ ಕರ್ತವ್ಯದ ಅವಧಿಯ ವೇಳಾಪಟ್ಟಿ ಬೆಳಿಗ್ಗೆ 6 ರಿಂದ 9 ಗಂಟೆಯವರೆಗೆ, ಮಧ್ಯಾಹ್ನ 11:30 ರಿಂದ 2:30 ಗಂಟೆಯವರೆಗೆ ಹಾಗೂ ಸಂಜೆ 6:00 ರಿಂದ 9:00 ಗಂಟೆಯವರೆಗೆ ಹಾಗೂ ಉಳಿದ ಅವದಿಯಲ್ಲಿ ಕೇಂದ್ರಸ್ಥಾನದಲ್ಲಿ ಲಭ್ಯವಿರುವಂತೆ ಸೂಚಿಸಲಾಗಿರುತ್ತದೆ. |
| ಆ) | ಅನ್ವಯಿಸದಿದ್ದಲ್ಲಿ, ಸರ್ಕಾರಿ ರಜೆ ಬದಲಾಗಿ ಪರ್ಯಾಯ ಸೌಲಭ್ಯ ಏನಾದರು ನೀಡಲಾಗುತ್ತಿದೆಯೇ; ಪರ್ಯಾಯ ಸೌಲಭ್ಯ ಇಲ್ಲ ಎಂದಾದಲ್ಲಿ ಯಾವ ಕ್ರಮ ಕೈಗೊಳ್ಳುವಿರಿ; | |
| ಇ) | ವಸತಿ ಶಾಲೆಗಳಲ್ಲಿ ನಿಲಯಪಾಲಕರಿಗೆ ರಜೆ ಇದೆ ಎಂದಾದಲ್ಲಿ ಸರ್ಕಾರಿ ರಜಾ ದಿನಗಳಲ್ಲಿ ವಸತಿ ನಿಲಯದ ಜವಾಬ್ದಾರಿ ಯಾರದ್ದಾಗಿರುತ್ತದೆ; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಬರುವ ಹೆಣ್ಣುಮಕ್ಕಳ ವಸತಿ ಶಾಲೆಗಳು ಮತ್ತು ಸಹ ಶಿಕ್ಷಣ ವಸತಿ ಶಾಲೆಗಳಲ್ಲಿ ಪುರುಷ ನಿಲಯಪಾಲಕರಿದ್ದಲ್ಲಿ ಸದರಿ ವಸತಿ ಶಾಲೆಯ ಹಿರಿಯ ಮಹಿಳಾ ಶಿಕ್ಷಕರನ್ನು ಜೇಷ್ಠತೆ ಆಧಾರದ ಮೇಲೆ ಹೆಚ್ಚುವರಿ ನಿಲಯಪಾಲಕರಾಗಿ ನೇಮಿಸುವುದು ಹಾಗೂ ಸದರಿ ಹೆಚ್ಚುವರಿ ನಿಲಯಪಾಲಕರು ಸಹ ಶಿಕ್ಷಣ ವಸತಿ ಶಾಲೆ/ಕಾಲೇಜುಗಳ ಮಹಿಳಾ ವಸತಿ ನಿಲಯದ ಪೂರ್ಣ ಜವಾಬ್ದಾರಿಗಳನ್ನು ನಿರ್ವಹಿಸತಕ್ಕದ್ದು ಎಂದು ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ ಮತ್ತು ಇವರೊಂದಿಗೆ ಹೆಚ್ಚುವರಿ ಜವಾಬ್ದಾರಿಯು ಪ್ರಾಂಶುಪಾಲರದ್ದಾಗಿರುತ್ತದೆ. |
| ಈ) | ವಸತಿ ಶಾಲೆಗಳಲ್ಲಿ ಶನಿವಾರ, ಭಾನುವಾರ ಮತ್ತು ಶಾಲಾ ಅವಧಿಯ ನಂತರ ಹಾಗೂ ಶಾಲಾ ಅವಧಿ ಮುಂಚಿತವಾಗಿ ವಿದ್ಯಾರ್ಥಿಗಳ ಜವಾಬ್ದಾರಿ ಯಾರದ್ದಾಗಿರುತ್ತದೆ; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ವಸತಿ ಶಾಲೆಗಳ ವಿದ್ಯಾರ್ಥಿಗಳ ಶೈಕ್ಷಣಿಕ ಗುಣ ಮಟ್ಟವನ್ನು ಕಾಯ್ದುಕೊಳ್ಳಲು ಪ್ರತಿ ದಿನ ಸಂಜೆ 5.30 ರಿಂದ 8.30 ರ ವರೆಗೆ STI (Study time in charge) ವಸತಿ ಶಾಲೆ/ಕಾಲೇಜಿನ ಒಬ್ಬ ಸಿಬ್ಬಂದಿಯನ್ನು ನಿಯೋಜಿಸಲಾಗಿರುತ್ತದೆ ಮತ್ತು ಪ್ರತಿ ಭಾನುವಾರ ಮತ್ತು ಸೋಮವಾರದಂದು ನಿಲಯಪಾಲಕರು STI (Study time in charge) ಕಾರ್ಯವನ್ನು ಹಂಚಿಕೆ ಮಾಡಲಾಗಿರುತ್ತದೆ. |

...2.

| | | |
|---|---|---|
| ಇ) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ನಿಲಯದಲ್ಲಿ 250, 420 ಹಾಗೂ 560 (ವಿದ್ಯಾರ್ಥಿಗಳ ಸಂಖ್ಯೆ) ಸಾಮರ್ಥ್ಯವಿರುವಲ್ಲಿ ಎಷ್ಟು ಜನ ನಿಲಯಪಾಲಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ವಸತಿ ಶಾಲೆ/ಕಾಲೇಜುಗಳಿಗೆ ಒಂದು ವಸತಿ ಶಾಲೆ/ಕಾಲೇಜಿಗೆ ಒಬ್ಬ ನಿಲಯಪಾಲಕರಂತೆ ನೇಮಿಸಿಕೊಳ್ಳುತ್ತಿದ್ದು, ಸಂಘದಲ್ಲಿ 815 ನಿಲಯಪಾಲಕರ ಹುದ್ದೆ ಮಂಜೂರಾಗಿದ್ದು, 430 ಖಾಯಂ ನಿಲಯಪಾಲಕರು ಕಾರ್ಯನಿರ್ವಹಿಸುತ್ತಿದ್ದಾರೆ. ನಿಲಯಪಾಲಕರ ಹುದ್ದೆ ಖಾಲಿ ಇರುವ ವಸತಿ ಶಾಲೆಗಳಲ್ಲಿ ಆಯಾ ಶಾಲೆಗಳ ಹಿರಿಯ ಶಿಕ್ಷಕರನ್ನು ನಿಲಯಪಾಲಕರ ಹುದ್ದೆಗೆ ಹೆಚ್ಚುವರಿ ಪ್ರಭಾರದಲ್ಲಿರಿಸಿ ಸೇವೆಯನ್ನು ಪಡೆಯಲಾಗುತ್ತಿದೆ |
| ಊ) | ಎಲ್ಲಾ ವಿದ್ಯಾರ್ಥಿಗಳ ಸಂಖ್ಯೆಗೆ ಒಬ್ಬರೆ ನಿಲಯಪಾಲಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆಂದರೆ, ನಿಲಯಪಾಲಕರ ವೇತನ ಶ್ರೇಣಿ ಎಷ್ಟು? | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿನ ವಸತಿ ಶಾಲೆಯಲ್ಲಿನ ಕಾರ್ಯನಿರ್ವಹಿಸುತ್ತಿರುವ ನಿಲಯಪಾಲಕರ ವೇತನ ಶ್ರೇಣಿ ರೂ.44425-1125-47800-1250-52800-1375-58300-1500-64300-1650-74200-1900-83700/- ಗಳು ಹಾಗೂ ಸಂಘದ ವಸತಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ನಿಲಯಪಾಲಕರ ವೇತನ ಶ್ರೇಣಿ ರೂ.61300-1500-64300-1650-74200-1900-85600-23600-99400-2700-112900/-ಗಳಾಗಿರುತ್ತವೆ. |

ಸಕಇ 290 ಎಂಡಿಎಸ್ 2025

(ಡಾ.ಹೆಚ್.ಸಿ. ಮಹದೇವಪ್ಪ)
ಸಮಾಜ ಕಲ್ಯಾಣ ಸಚಿವರು